ಎಂ.ಎಸ್. ಶ್ರೀರಾಮ್



# ಜಾತಿ ಮತ್ತು ಸಮಾನತೆಯ ಮಥನ

ಪ್ರಧಾನ ಮಂತ್ರಿಗಳ ಹತ್ಯೆಯ ಪಿತೂರಿಯಲ್ಲಿ ತೊಡಗಿದ್ದಾರೆಂದು ಚಿಂತಕರೊಬ್ಬರನ್ನು ಬಂಧಿಸಿ ಕಾರಾಗೃಹದಲ್ಲಿ ಇಟ್ಟಿರುವ ಸಮಯದಲ್ಲಿ, ಆ ಚಿಂತಕರ ಚಿಂತನೆಯ ಬಗ್ಗೆ ಮತ್ತು ಭಾರತದ ಸಂವಿಧಾನ, ಕಾನೂನುಗಳ ಬಗ್ಗೆ ಅವರ ನಿಲುವುಗಳು, ಅದಕ್ಕಿರುವ ತರ್ಕದ ಬಗ್ಗೆ ವಿಚಾರ ಮಾಡುವುದು ಸಮರ್ಪಕವೆನ್ನಿಸುತ್ತದೆ. ರಾಜಕೀಯ ನಿಲುವುಗಳನ್ನು ಹೊತ್ತು ತಮ್ಮ ಆಂದೋಲನವನ್ನು ನಡೆಯಿಸುವವರು ಹೆಚ್ಚಿನಂಶ ತಮ್ಮ ವಿಚಾರವಾದವನ್ನು ಮಂಡಿಸುತ್ತ, ಜನರನ್ನು ಆ ವಿಚಾರವಾದದತ್ತ ಸೆಳೆದು ತಮ್ಮ ತರ್ಕದಿಂದ ಗೆಲ್ಲಲು ಪ್ರಯತ್ನಿಸುತ್ತಾರೆಯೇ ಹೊರತು ವಿಚಾರವಾದಕ್ಕಿಂತ ತೀರಾ ಭಿನ್ನವಾದ ನಿಲುವನ್ನು ನಿಜಜೀವನದಲ್ಲಿ ಪಾಲಿಸಲು ಪ್ರಯತ್ನಿಸುವುದನ್ನು ನಾವು ಸಾಮಾನ್ಯವಾಗಿ ಕಾಣುವುದಿಲ್ಲ. ಭಯೋತ್ಪಾದಕರು ಶಾಂತಿಯ ಮಾತನ್ನು ಆಡುವುದಿಲ್ಲ. ಮಾವೋವಾದಿಗಳ ವ್ಯಕ್ತ ನಿಲುವು ಶಸ್ತ್ರಾಸ್ತ್ರಗಳ ವಿರುದ್ಧವಾಗಿರುವುದಿಲ್ಲ. ಹೀಗಾಗಿ, ಜನರ ಮಾತು, ವಿಚಾರ, ಬರವಣಿಗೆ ಮತ್ತು ಕೃತ್ಯಗಳಲ್ಲಿ ಅವರ ಇರಾದೆಯ ಒಂದು ಒಳನೋಟ ನಮಗೆ ಸಾಮಾನ್ಯವಾಗಿ ಸಿಗುತ್ತದೆ.

ಈ ಹಿನ್ನೆಲೆಯಲ್ಲಿ ಆನಂದ್ ತೇಲ್ತುಂಬ್ಡೆಯವರ 'ರಿಪಬ್ಲಿಕ್ ಆಫ್ ಕ್ಯಾಸ್ಟ್' ಒಂದು ಮುಖ್ಯ ಪುಸ್ತಕವಷ್ಟೇ ಅಲ್ಲ. ಈಗಿನ ಸಂದರ್ಭದಲ್ಲಿ ಅದರ ಪಠಣವೂ ಮುಖ್ಯವೇ. 'ಭಾರತ್ ಪೆಟ್ರೋಲಿಯಂ' ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾಗಿ, ಭಾರತ ಸರ್ಕಾರದ ಅಂಗಸಂಸ್ಥೆಯಲ್ಲಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸುತ್ತಲೇ ದಲಿತ ಚಳವಳಿ, ದಲಿತಪರ ವಿಚಾರವಾದದ ಬಗ್ಗೆ ಟಿಪ್ಪಣಿಗಳನ್ನು ಮಂಡಿಸುತ್ತ – ಒಂದು ಬೌದ್ಧಿಕ ಚರ್ಚೆಯನ್ನು ಕೈಗೊಂಡು, ಮುಖ್ಯಧಾರೆಯಲ್ಲಿರುತ್ತ, ಅದರೊಳಗಿನಿಂದಲೇ ಸಮಾನತೆಯ ವಿಚಾರಗಳನ್ನು ಮಂಡಿಸಿದ, ಶಾಂತಿಪರ ಮತ್ತು ಸಂವಿಧಾನದ ಚರ್ಚೆಯಲ್ಲಿ ತೊಡಗಿರುವ ಸಜ್ಜನರನ್ನು ಎರಡು ವರ್ಷಗಳನ್ನೂ ಮೀರಿ ಬಂಧನದಲ್ಲಿಟ್ಟಿರುವ ಈ ಸಂದರ್ಭದಲ್ಲಿ ಅವರ ಪುಸ್ತಕದ ಓದು, ಚರ್ಚೆ ತುಂಬಾ ಮುಖ್ಯವಾಗುತ್ತದೆ.

ತೇಲ್ತುಂಬ್ಡೆಯವರ ವಿಚಾರಗಳು ಸ್ಪಷ್ಟವಾಗಿವೆ. ಮಾರ್ಕ್ಸ್‌ವಾದಿ, ಗಾಂಧಿವಾದಿ ಮತ್ತು ಅಂಬೇಡ್ಕರ್ ವಿಚಾರಧಾರೆಗಳಿರುವ ಅಂತರವನ್ನು ಅವರು ತಮ್ಮ ಬರವಣಿಗೆಯಲ್ಲಿ ಬಿಡಿಸಿಡುತ್ತಾರೆ. ಮಾರ್ಕ್ಸ್‌ವಾದ ಕ್ರಾಂತಿಯ ಪಥಕ್ಕೂ ಅಂಬೇಡ್ಕರ್ ಪ್ರತಿಪಾದಿಸಿದ ಸಾಮಾಜಿಕ ಬದಲಾವಣೆಯ ಪಥಕ್ಕೂ ಇರುವ ಮೂಲಭೂತ ಅಂತರವನ್ನು ಅವರು ಬಿಡಿಸಿ ಹೇಳುತ್ತಾರೆ.

ತೇಲ್ತುಂಬ್ಡೆಯವರ ವಿಚಾರಗಳು ಸ್ಪಷ್ಟವಾಗಿವೆ. ಮಾರ್ಕ್ಸ್‌ವಾದಿ, ಗಾಂಧಿವಾದಿ ಮತ್ತು ಅಂಬೇಡ್ಕರ್ ವಿಚಾರಧಾರೆಗಳಿಗೆ ಅಂತರವನ್ನು ಅವರು ತಮ್ಮ ಬರವಣಿಗೆಯಲ್ಲಿ ಬಿಡಿಸಿಡುತ್ತಾರೆ.

